


# ನಡೆದಾಡುವ ಮರಗಳ ನೋಡುತ್ತ ನಡೆಯುತ್ತ...

ಜುಲೈ 26 ವಿಶ್ವ ಕಾಂಡ್ಲಾ ಸಂರಕ್ಷಣಾ ದಿನ

## ಕಾಂಡ್ಲಾ ವನದಲ್ಲಿ ನೀರ ಮೇಲಿನ ಅವಿಸ್ಮರಣೀಯ ನಡಿಗೆ

**ಪ್ರಕೃತಿಯ ಸಮತೋಲನ ಕಾಪಾಡುವಲ್ಲಿ ಹಾಗೂ ಜೀವಪ್ರಭೇದಗಳ ಸಂರಕ್ಷಣೆಯಲ್ಲಿ ಕಾಂಡ್ಲಾ ವನಗಳದ್ದು ಮಹತ್ವದ ಪಾತ್ರ. ಇಂಥ ಅಪೂರ್ವ ಕಾಂಡ್ಲಾ ವನವನ್ನು ಶರಾವತಿ ಅಳಿವೆ ಪರಿಸರದಲ್ಲಿ ಕಣ್ತುಂಬಿಕೊಳ್ಳಬಹುದು. ಕಾಂಡ್ಲಾ ವನಗಳ ಬಗ್ಗೆ ತಿಳಿದುಕೊಳ್ಳಲು, ಆ ಪರಿಸರಕ್ಕೆ ಭೇಟಿಕೊಡಲು ಮಳೆಗಾಲ ಅತ್ಯುತ್ತಮ ಸಮಯ.**

■ **ಕೃಷ್ಣಿ ಶಿರೂರ**

ಕುಮಟಾ–ಹೊನ್ನಾವರ–ಭಟ್ಕಳ ಹೆದ್ದಾರಿ ಮಾರ್ಗದಲ್ಲಿ ಪಯಣಿಸುವವರಿಗೆ ಹೆದ್ದಾರಿ ಪಕ್ಕದ ಶರಾವತಿ ಅಳಿವೆ ಪ್ರದೇಶ ಗಮನ ಸೆಳೆಯದೇ ಇರಲಾರದು. ಅಲ್ಲಿ ನೀರ ಮೇಲಿನ ಸಾಲು ಸಾಲು ಗುಂಪು ಮರಗಳು ಚಲಿಸುತ್ತಿರುವಂತೆ ಭಾಸವಾಗುತ್ತವೆ. 'ನಡೆದಾಡುವ ಮರಗಳು' ಎಂದೇ ಪ್ರತೀತಿ ಹೊಂದಿರುವ ಕಾಂಡ್ಲಾ ಗಿಡ, ಮರಗಳ ಪ್ರಭೇದವದು. ಈ ಮರಗಳ ಸಂದಿಗಳಲ್ಲೇ ನಾವು ನಡೆಯುತ್ತಿದ್ದೇವೆ ಎಂಬುದನ್ನು ಒಮ್ಮೆ ಕಲ್ಪಿಸಿಕೊಳ್ಳಿ!

ಊಹಿಸಿಕೊಂಡರೇನೆ ಮನಸ್ಸಿಗೆ ಎಷ್ಟೊಂದು ಮುದವುಂಟಾಗಲಿದೆ ಅಲ್ಲವೆ? ಇದೇ ಕಲ್ಪನೆಯನ್ನೇ ಕರ್ನಾಟಕ ಅರಣ್ಯ ಇಲಾಖೆ ಕಾಸರಕೋಡಿನ ಕಾಂಡ್ಲಾ ವನದಲ್ಲಿ ಅನುಷ್ಠಾನಗೊಳಿಸಿದೆ. ಅಲ್ಲಿನ ಕಾಂಡ್ಲಾ ವನದ 750 ಮೀಟರ್ ಹಾದಿಯಲ್ಲಿ ಕಾಂಡ್ಲಾ ವನದ ತಂಪಿನಲ್ಲಿ ಖುಷಿಯ ಹೆಜ್ಜೆಯಿಡಬಹುದಾಗಿದೆ. ಉತ್ತರ ಕನ್ನಡದ ಪ್ರವಾಸಿ ಪುಟದಲ್ಲಿ ಕಾಂಡ್ಲಾ ವನದೊಳಗಿನ ನಡಿಗೆ ವಿಭಿನ್ನ, ಅವಿಸ್ಮರಣೀಯ ಅನುಭವವನ್ನು ಕಟ್ಟಿಕೊಡಲಿದೆ.

ಈ ಕಾಂಡ್ಲಾ ವನಕ್ಕೆ ಹೇಗೆ ಬರಬೇಕೆಂದರೆ, ನೀವು ಭಟ್ಕಳ–ಹೊನ್ನಾವರ ಮಾರ್ಗದಲ್ಲಿ

